ಅವಕಾಶ ಮಾಡಿಕೊಡದೆ, ಎಲ್ಲರಿಗೂ ಕನ್ನಡದ ಬಗ್ಗೆ ಕಳಕಳಿ ಇದೆ. ಯಾರಿಗೂ ಅದರ ಬಗ್ಗೆ ವ್ಯತ್ಯಾಸ ಇಲ್ಲ. ಸರ್ಕಾರಕ್ಕೆ ಕಳಕಳಿ ಇಲ್ಲ ಎಂದು ನಾನು ಹೇಳುವುದಕ್ಕೆ ಸಿದ್ಧವಾಗಿಲ್ಲ. ದಯಮಾಡಿ ಅದಷ್ಟು ಬೇಗ ಸಮಸ್ಯೆಯನ್ನು ಬಗೆಹರಿಸಿ. ಅವರ ಬೇಡಿಕೆಯನ್ನು ಈಡೇರಿಸಿ ಎನ್ನುವಂಥ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಉಪಾಧ್ಯಕ್ಷರು : ಸನ್ಮಾನ್ಯ ಸದಸ್ಯರಾದಂಥ ವಾಟಾಳ್ ನಾಗರಾಜ್ ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಏನು ಪದ ಬಳಸಿದ್ದಾರೆ ಅದನ್ನು ಕಡತದಿಂದ ತೆಗೆದುಹಾಕಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಅಲ್ಲಿ ನಿಂತುಕೊಂಡು ಭಾಷಣ ಮಾಡಿದಿರೆ ಅದು ರೇಕಾರ್ಡಗೆ ಹೋಗುವುದಿಲ್ಲ. ನೀವು ಏತಕ್ಕೆ ಅದನ್ನು ಹೇಳುತ್ತೀರಿ?

ಸಕಲೇಶಪುರದ ಪುರಸಭೆಯ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆ.

+ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೆ, ಸಕಲೇಶಪುರದ ಪುರಸಭೆಯ ಚುನಾವಣೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ 13-2-1996ಕ್ಕೆ ನಿಗದಿಯಾಗಿತ್ತು. ಅವತ್ತು ನಾಮಪತ್ರವನ್ನು ಕೂಡ ತಹಶೀಲ್ದಾರ್‌ರವರು ಏನು ಚುನಾವಣಾಧಿಕಾರಿಯಾಗಿದ್ದರು ಅವರ ಸಮ್ಮುಖದಲ್ಲಿ ಸಲ್ಲಿಕೆ ಕೂಡ ಆಗುತ್ತಿತ್ತು. ನಾಮಪತ್ರ ಸಲ್ಲಿಕೆ ಏನು ಆಗಿತ್ತೋ ಅವರ ನಾಮಪತ್ರ ಸಲ್ಲಿಸಿದಂಥ ಕಡತವನ್ನೇ ಅಪಹರಿಸಿಕೊಂಡುಹೋದರು, ಹೊತ್ತುಕೊಂಡು ಹೋದರು ಅನ್ನತಕ್ಕಂಥ ಒಂದು ಕಂಪ್ಲೇಂಟನ್ನೂ ಚುನಾವಣಾಧಿಕಾರಿಯಾಗಿ ತಹಶೀಲ್ದಾರರು ಏನು ಇದ್ದರು ಅವರು ಕೊಟ್ಟಿದ್ದಾರೆ. ಇಲ್ಲಿಯವರೆಗೆ ಏನು ಕಂಪ್ಲೇಂಟ್ ಕೊಟ್ಟಿದ್ದಾರೆ ಅದರ ಬಗ್ಗೆ ಯಾವುದೇ ರೀತಿ ಕ್ರಮವನ್ನು ತೆಗೆದುಕೊಳ್ಳುವಂಥದ್ದು ಪೋಲೀಸ್ ಇಲಾಖೆಯಿಂದ ಆಗಿಲ್ಲ. ಅಪರಾಧಿ ಯಾರು ಎನ್ನೆವುದನ್ನು ಗುರುತು ಮಾಡತಕ್ಕಂಥದ್ದು ಆಗಿಲ್ಲ. ಎಫ್.ಐ.ಆರ್. ಕಾಪಿಯಲ್ಲಿ ಸ್ಪಷ್ಟವಾಗಿ ತಹಶೀಲ್ದಾರರವರು ಕೊಡುತ್ತಾರೆ. ಅಧ್ಯಕ್ಷತೆಗೆ ನಾಮಪತ್ರವನ್ನು ಸಲ್ಲಿಸುವುದಕ್ಕೆ ಶ್ರೀಮತಿ ಚಂದ್ರಮ್ಮನವರು ಬಂದಿದ್ದರು. ಉಪಾಧ್ಯಕ್ಷರ ಹುದ್ದೆಗೆ ನಾಮಪತ್ರವನ್ನು ಸಲ್ಲಿಸುವುದಕ್ಕೆ ಮಣಿ ಎನ್ನತಕ್ಕವರು ಬಂದಿದ್ದರು. ಇಬ್ಬರು ನಾಮಪತ್ರವನ್ನು ಅವರ ಜೊತೆ ಕೂಡಿ ಬಂದಂಥ ಜನ ಸಲ್ಲಿಸಿ ನಾನು ಅವರಿಗೆ ಹಿಂಬರಹವನ್ನು ಕೊಡತಕ್ಕಂಥ ಸಂದರ್ಭದಲ್ಲಿ, ಆ ನಾಮಪತ್ರವನ್ನು ಹಾಕಿದ್ದಂಥ ಕಡತವನ್ನು ಹೊತ್ತುಕೊಂಡು ಹೋದರು ಎಂದು ಹೇಳಿ ಸ್ಪಷ್ಟವಾಗಿ ತಹಶೀಲ್ದಾರರು ಕೊಟ್ಟಿದ್ದಾರೆ ಅಧ್ಯಕ್ಷರೆ, ಅವರ ಜೊತೆ ಇದ್ದವರು ಯಾರು ಯಾರು ಎಂದು ಅವರ ಹೆಸರನ್ನು ಅವರ ಕಂಪ್ಲೇಂಟಿನಲ್ಲಿ ಕೊಡತಕ್ಕಂಥದ್ದಾಗಿದೆ. ಈ ಸಂದರ್ಭ ಹೇಗಿತ್ತು ಅಂದರೆ ಅಧ್ಯಕ್ಷತೆ ಎಲ್ಲಾ ಒಂದೇ ಪಕ್ಷದವರು. ತಹಶೀಲ್ದಾರರ ತಾಲ್ಲೂಕು ಕಛೇರಿಯಲ್ಲಿ ಚುನಾವಣೆ 13 ನೇ ತಾರೀಖು ೮ ಗಂಟೆಯಿಂದ 12 ಗಂಟೆವರೆಗೆ.

1.30 ಪಿ.ಎಂ.

ನಾಮಿನೇಷನ್ ಮಾಡಿದಂತಹ ಕಾಲ 8.27 ನಿಮಿಷ. ತಾಲ್ಲೂಕು ಆಫೀಸ್ ಎಲ್ಲಿದೆ ಅಂದರೆ ಪೋಲೀಸ್ ಸ್ಟೇಷನ್ ಎದುರುಗಡೆ 50 ಅಡಿ ದೂರದಲ್ಲಿದೆಯೆಂದು ಅವರೇ ಹೇಳುತ್ತಾರೆ.

ಪೋಲೀಸನವರೂ ಕೂಡ ಇದ್ದರು ಎಂದು ಹೇಳುತ್ತಾರೆ. ಇಷ್ಟೆಲ್ಲ ಇದ್ದಾಗ ನಾಮಪತ್ರ ಸಲ್ಲಿಸಿದಂತಹ ಕಡತವನ್ನು ಹೊತ್ತುಕೊಂಡು ಹೋದರು ಅಂದರೆ ಇದರಲ್ಲಿ ಏನಿರಬಹುದು? ಆಗ ಪೋಲಿಸನವರು ಇದ್ದರೂ ಕ್ರಮ ತೆಗೆದುಕೊಂಡಿಲ್ಲದಿರುವುದನ್ನು ನಾವು ಯೋಚನೆ ಮಾಡಬೇಕು. ಇಷ್ಟು ದಿವಸಗಳಾದರೂ ಅಪರಾಧಿ ಯಾರು? ಆರೋಪಿ ಯಾರು; ಎನ್ನುವುದನ್ನು ಕಂಡು ಹಿಡಿಯತಕ್ಕದ್ದು ಅಥವಾ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕದ್ದು ನಾವು ಬಹಳ ಚಿಂತನೆ ಮಾಡಬೇಕಾದ ವಿಚಾರ. ಎರಡನೆಯದು ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ಇದುವರೆಗೆ ಇನ್ನೂ ನಿಗದಿ ಮಾಡಲಿಲ್ಲ. ಈ ಡಿಲೇ ಟ್ಯಾಕ್ಟೀಸ್ ಏಕೆ? ಈಗ ಏನೋ ಮಾಡಿದ್ದಾರೋ ಏನೋ ಗೊತ್ತಿಲ್ಲ. ನಾವೆಲ್ಲ ಕಾರ್ಯದರ್ಶಿಯವರ ಮೇಲೆ ಬಹಳ ಒತ್ತಾಯ ತಂದು ಅವರ ಹತ್ತಿರ ಹೋಗಿ ನೀವು ಏಕೆ ಚುನಾವಣೆ ಮಾಡಲಿಲ್ಲ, ತಹಶೀಲ್ದಾರಗೆ ಅಧಿಕಾರವಿದ್ದರೆ ನೀವು ಏಕೆ ಚುನಾವಣೆ ನಡೆಸಲಿಲ್ಲ, ಜಿಲ್ಲಾಧಿಕಾರಿಗಳನ್ನು ಅಪ್ರೋಚ್ ಮಾಡಬೇಕಾಗಿದ್ದರೆ, ನೀವು ಏಕೆ ಅಪ್ರೋಚ್ ಮಾಡಲಿಲ್ಲ? ಎಂದು ಕಾರ್ಯದರ್ಶಿಯವರು ಒತ್ತಡ ತಂದಮೇಲೆ ಅವರು ನಾನು ಏನೋ ಆದೇಶ ಕೊಟ್ಟಿದ್ದೇನೆ ಎನ್ನುವುದನ್ನು ಹೇಳಿದರು. ಇದು ಡೆಲಿಬರೇಟಾಗಿ ಚುನಾವಣೆಯನ್ನು ಮುಂದೂಡುವುದಕ್ಕೆ ಯಾವುದೋ ಒಂದು ಪಕ್ಷದವರು ಮಾಡಿದಂತಹ ಸಂಚು. ಅದು ತಹಶೀಲ್ದಾರರವರ ಸಮ್ಮುಖದಲ್ಲಿ, ಪೋಲೀಸ್ ಸ್ಟೇಷನ್ ಎದುರುಗಡೆ ಪೋಲೀಸನವರು ಇದ್ದಂತಹ ಕಾಲದಲ್ಲಿ ಇಂತಹ ಒಂದು ಕ್ರಿಮ ನಡೆಯುತ್ತದೆಂದರೆ ಸರ್ಕಾರ ಇದುವರೆಗೆ ಏನು ಗಮನಹರಿಸಿದೆ? ಅದು ಮುಖ್ಯಮಂತ್ರಿಗಳ ಜಿಲ್ಲೆ ವಿಶೇಷವಾಗಿ ಹಾಸನ ಜಿಲ್ಲೆಯಲ್ಲಿ ಒಂದು ಪುರಸಭೆ ಚುನಾವಣೆಯಲ್ಲಿ ಈ ರೀತಿ ನಡೆದಿದೆಯೆಂದರೆ, ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ, ಮತ್ತೆ ಯಾವತ್ತು ಚುನಾವಣೆಯನ್ನು ನಿಗದಿ ಮಾಡಿದೆ? ಅದರ ಬಗ್ಗೆ ಸರ್ಕಾರ ಮಾಹಿತಿಯನ್ನು ಒದಗಿಸಬೇಕೆಂದು ತಮ್ಮ ಮೂಲಕ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಸಭಾಧ್ಯಕ್ಷರೆ, ಚುನಾವಣೆಯಲ್ಲಿ ಚುನಾವಣೆಯ ಪ್ರಕ್ರಿಯೆಗೆ ಹಸ್ತಕ್ಷೇಪ ಮಾಡುವುದೇ ಮಹಾ ಅಪರಾಧ. ಚುನಾವಣೆಯ ನಾಮಪತ್ರ ಸಲ್ಲಿಸುವುದಕ್ಕೆ ಹೋದವರನ್ನು ಹಿಂದೆ ಯಾರೋ ನಾಮಪತ್ರ ಸಲ್ಲಿಸಿದ್ದಾರೆ ನೋಡೋಣ ಕೊಡಿಯೆಂದು ಹೇಳಿ ಅವರ ಕೈಗೆ ತೆಗೆದುಕೊಂಡು, ನಾವು ಚುನಾವಣೆಯ ಗೆಲ್ಲುವುದಿಲ್ಲ ನಮಗೆ ಬಹುಮತವಿಲ್ಲವೆಂದು ತಿಳಿದುಕೊಂಡು ಚುನಾವಣೆ ನಡೆಯುವುದನ್ನು ತಪ್ಪಿಸಬೇಕೆಂದು ಹೇಳಿ ಹಾಡುಹಗಲಿನಲ್ಲಿ ನಾಮಿನೇಷನ್ ಪತ್ರವನ್ನು ಅವರ ಕೈಗೆ ತೆಗೆದುಕೊಂಡು ಹೋಗುತ್ತಾರೆ ಪೋಲೀಸನವರ ಸಮ್ಮುಖದಲ್ಲಿ, ಇದೆಲ್ಲವನ್ನು ನೋಡಿ ಕುಳಿತುಕೊಂಡಿದ್ದಾರೆ ಅಧಿಕಾರಿಗಳು ಅಂದರೆ ಇದಕ್ಕಿಂತ ನಾಚಿಕೆಗೇಡಿನ ಕೆಲಸ ಮತ್ತೊಂದು ಇಲ್ಲ. ಇಷ್ಟಾದರೂ ಕೂಡ ಹಾಡುಹಗಲೇ ಯಾರು ತೆಗೆದುಕೊಂಡು ಹೋಗಿದ್ದಾರೆಂದು ಗೊತ್ತು. ಯಾರು ನಾಮಪತ್ರ ಸಲ್ಲಿಸಲಿಕ್ಕೆ ಬಂದಿದ್ದರೋ ಅವರಿಗೆ ಅವರು ನೋಡಲಿಕ್ಕೆ ಕೊಟ್ಟಿದ್ದಾರೆ. ಎಲ್ಲಿ ಅವಕಾಶ ಇದೆ ಅದು? ಹೊತ್ತುಕೊಂಡು ಹೋಗಿದ್ದಾರೆ ಅವರನ್ನು ಇವತ್ತಿನವರೆಗೂ ಹಿಡಿದಿಲ್ಲ. ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಇದನ್ನು ಸರ್ಕಾರ ಕೂಡ ಷಾಮೀಲಾಗಿ ಮಾಡಿರತಕ್ಕ ಕೆಲಸ ಇದು. ಇಂತಹದ್ದು ಇನ್ನುಮುಂದೆ ನಡೆಯಬಾರದು. ಅದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳತ್ತದೆ ಅದನ್ನು ದಯಮಾಡಿ ತಿಳಿಸಬೇಕೆಂದು ನಾನೂ ಕೂಡ ಒತ್ತಾಯ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು : ಯಾರು ನಗರಾಡಳಿತ ಸಚಿವರು ಮಾನ್ಯ ವೈಜನಾಥ ಪಾಟೀಲರೆ, ಉತ್ತರ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ನಾವು ಏನು ಹೇಳಿದ್ದೇವೆ ಅದನ್ನು ಕೇಳಿಸಿಕೊಂಡಿದ್ದಾರೆಯೇ ಕೇಳಿ ನೋಡಿ. ಈ ರೀತಿಯಾಗಿ ಇದಕ್ಕೆ ಯಾರು ರೆಸ್ಪಾನ್ಸಿಬಲ್ ಇಲ್ಲವೆಂದರೆ ಯಾವರೀತಿಯಾಗಿ ಸದನ ನಡೆಸಬೇಕು? ಇಲ್ಲಿ ನಾವು ಏಕೆ ಕೇಳಬೇಕು? ಮೊದಲೇ ನಾವು ಜಿರೋ ಅವರನಲ್ಲಿ ಎತ್ತುತ್ತೇವೆಂದು ಕೇಳಿಕೊಂಡು ಬರೆದುಕೊಟ್ಟು ಬಂದಿದ್ದೇವೆ. ಇದು ಮೂರನೆಯ ದಿವಸ. ನಾವು ಕಾಲಿಂಗ್ ಅಟೆನಷನನಲ್ಲಿ ಕೊಟ್ಟಿದ್ದೋ ಅದು ಬೇಡ ನೀವು ಜಿರೋ ಅವರನಲ್ಲಿ ಎತ್ತಿಯೆಂದು ಮಾನ್ಯ ಸಭಾಧ್ಯಕ್ಷರು ಹೇಳಿದ ಮೇಲೆ ಮಾನ್ಯ ಸದಸ್ಯರು ಎತ್ತಿದ್ದಾರೆ. ಅದೇನು ಎಲ್ಲಿ ನಡೆಯಿತು ಚುನಾವಣೆ ಯಾವ ಊರಿನಲ್ಲಿ ಆಯಿತು, ಅಧಿಕಾರಿ ಅಲ್ಲಿ ಹೋದಾಗ ನಾಮಿನೇಷನ್ ಪೇಪರ್ ತೆಗೆದುಕೊಂಡು ಹೋದರೆಂದರೆ, ಅದನ್ನು ಯಾರು ಕೇಳಲಿಲ್ಲವೆಂದರೆ ಇದಕ್ಕೆ ಉತ್ತರ ಹೇಗೆ ಹೇಳುತ್ತಾರೆ? ನಾವು ಯಾರಿಗೆ ಹೇಳುವುದು? ಮತ್ತೆ ನಾವು ಇಲ್ಲಿ ಏಕೆ ಎತ್ತಬೇಕು? Nobody is responsible, why should we raise it here? ಈ ರೀತಿಯಾಗಿ ಈ ಸರ್ಕಾರದ ಧೋರಣೆ ಇದ್ದರೆ, ನಾವು ಇದನ್ನು ಖಂಡಿಸಿ ವಾಕೌಟ್ ಮಾಡುತ್ತೇವೆ. ಈ ಪ್ರಶ್ನೆಯನ್ನು ಎತ್ತುತ್ತೇವೆಂದು ನಿಮ್ಮಲ್ಲಿ ಬಂದು ಹೇಳಿ, ನಾವು ಕಾಲಿಂಗ್ ಅಟೆನ್‌ಷನ್‌ನಲ್ಲಿ ಕೊಟ್ಟಾಗ ನೀವು ಕಾಲಿಂಗ್ ಅಟನಷನ್ ಹಾಕಬೇಡಿ ನೀವು ಇದನ್ನು ಜಿರೋ ಅವರನಲ್ಲಿ ಎತ್ತಿ ಎಂದು ಹೇಳಿದ ಮೇಲೆ ನಾವು ಎತ್ತಿದ ಮೇಲೆ ಕೂಡ ನೀವು ಉತ್ತರ ಕೊಡುವುದಕ್ಕೆ ತಯಾರಿಲ್ಲ. ಇದು ನಿಮಗೆ ಗೊತ್ತಿಲ್ಲವೆಂದರೆ ಎಲ್ಲಿಯವರೆಗೆ ನಾವು ಇದನ್ನು ಸಹಿಸುವುದಕ್ಕೆ ಆಗುತ್ತದೆ? ಇಂತಹ ಧೋರಣೆಯನ್ನು ಖಂಡಿಸಿ ನಾವು ಸಭೆಯಿಂದ ಹೊರಗಡೆ ಹೋಗುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾದ ಮಲ್ಲಿಕಾರ್ಜುನಖರ್ಗೆಯವರು ನೇತೃತ್ವದಲ್ಲಿ ಬಹುತೇಕ ಕಾಂಗ್ರೆಸ್ ಸದಸ್ಯರು ಸಭೆಯಿಂದ ಸಭಾತ್ಯಾಗ ಮಾಡಿದರು).

ಶ್ರೀ ಬಿ. ಶಿವರಾಮ್ : ಚುನಾವಣೆಯಲ್ಲಿ ಗೂಂಡಾಗಿರಿ ನಡಿದಿರತಕ್ಕದ್ದು, ಉದ್ದೇಶಪೂರ್ವಕವಾಗಿ ನಾಮಪತ್ರಗಳನ್ನು ಹೊತ್ತುಕೊಂಡು ಹೋಗತಕ್ಕದ್ದು, ತಹಶೀಲ್ದಾರರವರ ದೂರಿನಲ್ಲಿ ಕೊಟ್ಟಿದ್ದಾರೆ ಗುಂಪಿನಲ್ಲಿದ್ದವರು ಹೊತ್ತುಕೊಂಡು ಹೋದರು ಎಂದು. ಎಫ್.ಐ.ಆರ್ ಕಾಪಿ ಇದೆ. ನಾನು ಬೇಕಾದರೆ ಆ ಕಾಪಿಯನ್ನು ತರಿಸಿಕೊಡುತ್ತೇನೆ. ಗುಂಪಿನಲ್ಲಿದ್ದವರೇ ಹೊತ್ತುಕೊಂಡು ಹೋದರು ಎಂದು ಹೇಳುತ್ತಾರೆ. ಸಬ್ ಇನ್ಸಪೆಕ್ಟರ್ ಇದ್ದರು ಎಂದು ಹೇಳುತ್ತಾರೆ. ಇಷ್ಟೆಲ್ಲ ಇದ್ದರೂ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ, ಆದರೆ9ನೇ ತಾರೀಖು ತಾಲ್ಲೂಕು ಕಾಂಗ್ರೆಸ್ (ಐ) ಅಧ್ಯಕ್ಷರು ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ಅರ್ಜಿಯನ್ನು ಕೊಟ್ಟಿದ್ದಾರೆ. ಈ ರೀತಿಯ ವ್ಯವಸ್ಥೆ ಸಂಚು ನಡೆಯುತ್ತಿದೆಯೆಂದು. ಅದರ ಕಾಪಿಗಳು ಕೂಡ ನನ್ನಲ್ಲಿದೆ. ಇಷ್ಟೆಲ್ಲ ಕೊಟ್ಟರೂ ಗೂಂಡಾಗಿರಿ ಮಾಡಿ ನಾಮಪತ್ರಗಳನ್ನು ಹೊತ್ತುಕೊಂಡು ಹೋಗುತ್ತಾರೆಂದರೆ ಇದೇನು ಸರ್ಕಾರ ಅಧ್ಯಕ್ಷರೆ? ನಂಜುಂಡ ಸ್ವಾಮಿಯವರ ಮೇಲೆ ಈ ರಾಜ್ಯದಲ್ಲಿ ಗೂಂಡಾಗಿರಿ ನಡೆಯುವುದಕ್ಕೆ ನಾವು ಬಿಡುವುದಿಲ್ಲವೆಂದು

ಹೇಳಿದರು. ಆದರೆ ಇದು ಆಗಿರತಕ್ಕದ್ದು ಗೂಂಡಾಗಿರಿಯಲ್ಲವೆ? ಅದೇ ಜಲ್ಲೆಯಲ್ಲಿ ಬೇರೆ ಒಂದು ದೂರು ಬಂದರೆ ಒಂದಲ್ಲ ಎರಡಲ್ಲ ಮುರ್ನಾಲ್ಕು ಎಫ್‌ಐಆರ್‌ಗಳನ್ನು ಹಾಕಿಸತಕ್ಕ ಕೆಲಸ ನಡೆಯುತ್ತದೆ. ಇಲ್ಲಿ ರಾಜಾರೋಷವಾಗಿ ನಡೆದಂತಹ ಚುನಾವಣೆಯ ಬಗ್ಗೆ ಕ್ರಮ ತೆಗೆದುಕೊಳ್ಳದೆ ಡಿಲೇ ಟ್ಯಾಕ್ಟೀಸ್ ಬೇಕಾಗಿಯೇ ಮಾಡತಕ್ಕದ್ದು ಇಂತಹ ವ್ಯವಸ್ಥೆ, ನಿನ್ನೆ ನಾನು ಗೃಹಸಚಿವರಾದ ಮಾನ್ಯ ಸಿಂಧ್ಯಾರವರ ಹತ್ತಿರ ಮಾತನಾಡಿದ್ದೇನೆ. ಒಂದು ಸಣ್ಣ ವಿಚಾರಕ್ಕೆ ಮುರ್ನಾಲ್ಕು ಎಫಐಆರಗಳನ್ನು ಹಾಕಿಸತಕ್ಕ ಕೆಲಸವನ್ನು ಮಾಡಿಸಿದ್ದಾರೆ. ಒಬ್ಬರಿಗೊಂದು ಒಬ್ಬರಿಗೊಂದು ನ್ಯಾಯ ನಡೆಯತಕ್ಕದ್ದು ಆದರೆ ಈ ಜಿಲ್ಲೆಯಲ್ಲಿ ಬೇರೆ ಶಾಸಕರು ಬೇರೆ ಪಕ್ಷದವರು ಯಾವರೀತಿ ನಡೆದುಕೊಳ್ಳಬೇಕಾಗುತ್ತದೆ? ಇದು ಸರಿಯಲ್ಲ, ಇದನ್ನು ನಾವು ತೀವ್ರವಾಗಿ ಖಂಡಿಸಿ ಪ್ರತಿಭಟನೆ ಮಾಡಿ ಸಭಾತ್ಯಾಗವನ್ನು ಮಾಡುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ :.ಮಾನ್ಯ ಉಪಾಧ್ಯಕ್ಷರೆ...

ಉಪಾಧ್ಯಕ್ಷರೆ : ನಿಮ್ಮ ಪಕ್ಷದ ನಾಯಕರು ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ, ನೀವು ಬೇರೆ ತೀರ್ಮಾನ ತೆಗೆದುಕೊಳ್ಳುತ್ತೀರೋ?

ಶ್ರೀ ಎ. ಟಿ. ರಾಮಸ್ವಾಮಿ : ಇಲ್ಲ. ಯಾರಾದರೂ ಕಾನೂನನ್ನು ಕೈಗೆ ತೆಗೆದುಕೊಂಡರೆ ಯಾವುದೇ ಸರ್ಕಾರ ಸುಮ್ಮನೆ ಕೂಡುವುದಿಲ್ಲ.

ಉಪಾಧ್ಯಕ್ಷರು : ನಿಮ್ಮ ನಾಯಕರು ಈಗ ಒಂದು ತೀರ್ಮಾನ ತೆಗೆದುಕೊಂಡು ಹೋಗಿದ್ದಾರೆ.

ಶ್ರೀ ಎ.ಟಿ. ರಾಮಸ್ವಾಮಿ : ಆಯಿತು, ನಾವು ಒಂದು ತೀರ್ಮಾನ ತೆಗೆದುಕೊಳ್ಳುತ್ತೇನೆ. ಇದು ಯಾವ ಸರ್ಕಾರ? ಈ ಸರ್ಕಾರಕ್ಕೆ ನಾವು ಏನೆಂದು ಹೇಳಬೇಕು? ಇದನ್ನು ಷಂಡ ಸರ್ಕಾರವೆಂದು ಹೇಳಬೇಕೆ? ಎಕೆ ಕೈ ಕಟ್ಟಿಕೊಂಡು ಕುಳಿತುಕೊಂಡಿದ್ದೀರಿ? ನಾಮಪತ್ರಗಳನ್ನು ಹಾಡುಹಗಲೇ ಹೊತ್ತುಕೊಂಡು ಹೋದರೂ ಕೂಡ ಅದು ಪೋಲೀಸಿನವರ ಮುಂದೆ ಅಧಿಕಾರಿಗಳ ಮುಂದೆ ಸುಮ್ಮನೆ ಹೇಳಬೇಕು? ಇದನ್ನು ಷಂಡ ಸರ್ಕಾರವೆಂದು ಹೇಳಿ ನಾನು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಎ.ಟಿ. ರಾಮಸ್ವಾರಮಿಯವರು ಸಭಾತ್ಯಾಗ ಮಾಡಿದರು)

ಶ್ರೀ ಬಿ. ಶಿವರಾಮ್ : ಎಫಐಆರ್ ಕಾಪಿ ಬೇಕೇ ನಿಮಗೆ ಕಳುಹಿಸಿ ಕೊಡುತ್ತೇನೆ. ಕಂಪ್ಲೆಂಟ್ ಎಂಡಾರ್ಸಮೆಂಟ್ ಕಾಪಿ ತಹಶೀಲ್ದಾರರವರು ಕೊಟ್ಟಿರತಕ್ಕದ್ದು ಅದನ್ನು ಕೊಡುತ್ತಿದ್ದೇನೆ. ಇದನ್ನೆಲ್ಲ ತೆಗೆದುಕೊಂಡು ಪರಿಶೀಲನೆ ಮಾಡಬಹುದು ತಮ್ಮ ಮುಖಾಂತರ ಕಳುಹಿಸಿ ಕೊಡುತ್ತಿದ್ದೇನೆ. ಏನು ಮಾಹಿತಿ ಎನ್ನುವುದನ್ನು ಪೂರ್ತಿ ನೋಡಿ. ಇದನ್ನು ಹೊರತುಪಡಿಸಿ, ಲಿಖಿತವಾಗಿರತಕ್ಕದ್ದು ಹೊರತುಪಡಿಸಿ ಒಂದೇ ಒಂದು ಪದವನ್ನು ನಾನು ಬಳಸಿಲ್ಲ. ಹೋಮ್ ಮಿನಿಸ್ಟರ್ ಬೇಕಾದರೆ ಇದನ್ನು ಎಕ್ಸಾಮಿನ್ ಮಾಡಿಸಬಹುದು. ರೆವಿನ್ಯೂ ಮಿನಿಸ್ಟರ್ ಎಕ್ಸಾಮಿನ್ ಮಾಡಿಸಬಹುದು. ಎಂಡಾರ್ಸ್‌ಮೆಂಟ್ ಕಾಪಿ ಮತ್ತು ಎಫಐಆರ್ ಕಾಪಿ ಇದನ್ನು ಆಧರಿಸಿ ಮಾತನಾಡಿರತಕ್ಕದ್ದು ಸರ್ಕಾರ ವಿಫಲವಾಗಿದೆಯೆಂದು

ಇದಕ್ಕಿಂತ ಇನ್ನೇನು ಹೇಳಬೇಕು. ಒಂದು ಜಿಲ್ಲೆಗೆ ಒಂದು ರೀತಿ ಇನ್ನೊಂದು ಜಿಲ್ಲೆಗೆ ಒಂದು ರೀತಿ. ಅದೇ ಜಿಲ್ಲೆಯಲ್ಲಿ ಒಂದು ಕ್ಷೇತ್ರಕ್ಕೆ ಒಂದು ರೀತಿ ಇನ್ನೊಂದು ಕ್ಷೇತ್ರಕ್ಕೆ ಒಂದು ರೀತಿ. ಈ ರೀತಿ ಕೃತ್ಯಗಳೆಲ್ಲ ನಡೆಯುತ್ತಿದ್ದರೆ ನಾವು ಶಾಸಕರುಗಳಾಗಿ ಇರುವುದಕ್ಕೆ ಆಗುತ್ತದೆಯೇ? ನಾವು ಕೆಲಸ ಮಾಡುವುದಕ್ಕೆ ಸಾಧ್ಯತೆ ಇದೆಯೇ? ಬೇರೆ ಕ್ಷೇತ್ರಗಳಲ್ಲಿ ಕಾರ್ಯಕ್ರಮಗಳನ್ನು ಮಾಡಿದಾಗ ಬೇರೆ ಪಕ್ಷದಶಾಸಕರು ಇದ್ದರೆ ಅವರ ಹೆಸರುಗಳನ್ನು ಆಹ್ವಾನಪತ್ರಿಕೆಗಳಲ್ಲಿ ಹಾಕಿಸುವುದಿಲ್ಲ. ಅವರ ಬಗ್ಗೆ ಬೇರೆ ರೀತಿಯಲ್ಲಿ ಟೀಕೆಗಳನ್ನು ಮಾಡತಕ್ಕದ್ದನ್ನು ಮಾಡುತ್ತಾರೆ. ಇದನ್ನು ಸರ್ಕಾರ ತೀವ್ರವಾಗಿ ಪರಗಣಿಸದೇ ಹೋದರೆ ನಮ್ಮಗಳಿಗೆ ರಕ್ಷಣೆ ಸಿಗುವುದಿಲ್ಲವೆಂದು ನಾನೂ ಸಹ ಸಭಾತ್ಯಾಗವನ್ನು ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಬಿ. ಶಿವರಾಮರವರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು : ಈ ವಿಷಯದ ಬಗ್ಗೆ ನಾಳೆ ಸಂಬಂಧಪಟ್ಟ ಸಚಿವರು ಉತ್ತರ ಕೊಡಬೇಕು.

ಶ್ರೀ ವೈಜನಾಥ್ ಪಾಟೀಲರು : ಅದೆರ ಬಗ್ಗೆ ರಿಪೋರ್ಟ್ ತರಿಸಿಕೊಂಡು ನಾನುಉತ್ತರ ಕೊಡುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ಉಪಾಧ್ಯಕ್ಷರು : ಈಗ ಶೂನ್ಯವೇಳೆ ಮುಗಿಯಿತು. ಇನ್ನು ಗಮನ ಸೆಳೆಯುವ ಸೂಚನೆಗಳು.

ಸ್ನಾತಕೋತ್ತರ ಪದವಿಗಳಾದ ಎಂ.ಡಿ. ಎಂ.ಎಸ್. ಹಾಗೂ ಡಿಪ್ಲೋಮ ಕೋರ್ಸುಗಳ ಪ್ರವೇಶದಲ್ಲಿ ಆಕ್ರಮ.

ಶ್ರೀ ಎ. ರಾಮದಾಸ್ : ಸನ್ಮಾನ್ಯ ಉಪಾಧ್ಯಕ್ಷರೆ, ವೈದ್ಯಕೀಯ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಗಳಾದ ಎಂ.ಡಿ. ಎಂ.ಎಸ್. ಹಾಗೂ ಡಿಪ್ಲೋಮಾ ಇವುಗಳ ಪ್ರವೇಶದಲ್ಲಿ ಅಕ್ರಮವಾಗಿರುವ ಬಗ್ಗೆ ಹಾಗೂ ಈ ಅಕ್ರಮದಿಂದ ಸರ್ಕಾರದ ಎಲ್ಲ ಹಂತಗಳಲ್ಲೂ ಕೂಡ ಕೋಟ್ಯಾಂತರ ರೂಪಾಯಿಗಳ ಹಸ್ತಾಂತರ ಆಗಿರುವುದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ.

+ಶ್ರೀ ಎ. ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯಮಂತ್ರಿ) : ಸನ್ಮಾನ್ಯ ಉಪಾಧ್ಯಕ್ಷರೇ, ಗೌರವಾನ್ವಿತ ಸದಸ್ಯರು ಏನು ಆಪಾದನೆ ಮಾಡಿದ್ದಾರೆ, ಅದು ಸುಳ್ಳು ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅವರು ಬೇಕಾದರೆ ನಿರ್ದಿಷ್ಟವಾದ ಯಾವುದಾದರೂ ಒಂದು ಉದಾಹರಣೆಯನ್ನು ಹೇಳಲಿ.

ಉಪಾಧ್ಯಕ್ಷರು : ಮೊದಲು ನೀವು ಸ್ಟೇಟಮೆಂಟ್ ಮಾಡಿ.

ಶ್ರೀ ಎ.ಬಿ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ನನ್ನ ಹೇಳಿಕೆಯನ್ನು ಓದಲು ತಮ್ಮ ಅಪ್ಪಣೆ ಕೇಳುತ್ತೇನೆ.

1994-95ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮಾ ಸೀಟುಗಳು, ಸರ್ಕಾರಿ